***ಈ ಪ್ರಶ್ನೆಪುಸ್ತಿಕೆಯನ್ನು ತೆರೆಯುವಂತೆ ನಿಮಗೆ ತಿಳಿಸುವವರೆಗೂ ಇದನ್ನು ತೆರೆಯಕೂಡದು***

**2018**

***ಪ್ರಶ್ನೆ ಪತ್ರಿಕೆ ಶ್ರೇಣಿ***

**A**

# ಪ್ರಶ್ನೆ ಪುಸ್ತಿಕೆ

## ನಿರ್ದಿಷ್ಟ ಪತ್ರಿಕೆ (ಪತ್ರಿಕೆ II)

**ವಿಷಯ ಸಂಕೇತ : 297**

***ಸಮಯ : 2 ಗಂಟೆಗಳು*** ***ಗರಿಷ್ಠ ಅಂಕಗಳು : 200***

## ಸೂಚನೆಗಳು

1. ಪರೀಕ್ಷೆ ಪ್ರಾರಂಭವಾದ ಕೂಡಲೇ ನಿಮ್ಮ ಪ್ರಶ್ನೆಪತ್ರಿಕೆಯಲ್ಲಿ ಅಮುದ್ರಿತ ಅಥವಾ ಹರಿದಿರುವ ಅಥವಾ ಬಿಟ್ಟು ಹೋಗಿರುವ ಪುಟಗಳು ಅಥವಾ ಪ್ರಶ್ನೆಗಳು ಇತ್ಯಾದಿಗಳು ಕಂಡುಬಂದಲ್ಲಿ ನಿಮ್ಮ ಒ.ಎಂ.ಆರ್. ಉತ್ತರ ಹಾಳೆಯಲ್ಲಿ ಮುದ್ರಿತವಾಗಿರುವ ಅದೇ ಶ್ರೇಣಿಯ ಪೂರ್ಣ ಪ್ರಶ್ನೆ ಪತ್ರಿಕೆ ಯೊಂದಿಗೆ ಬದಲಾಯಿಸಿ ಕೊಳ್ಳತಕ್ಕದ್ದು.
2. **ಅಭ್ಯರ್ಥಿಯು ಪ್ರಶ್ನೆ ಪತ್ರಿಕೆಯ ಶ್ರೇಣಿಯು, ತಮ್ಮ ಒ.ಎಂ.ಆರ್. ಉತ್ತರ ಹಾಳೆಯಲ್ಲಿ ಮುದ್ರಿತವಾಗಿರುವ ಅದೇ ಪ್ರಶ್ನೆಪತ್ರಿಕೆಯ ಶ್ರೇಣಿಯಾಗಿರುವುದೇ ಎಂಬುದನ್ನು ಖಚಿತಪಡಿಸಿಕೊಳ್ಳಬೇಕು. ವ್ಯತ್ಯಾಸಗಳು ಕಂಡುಬಂದಲ್ಲಿ, ಸಂವೀಕ್ಷಕರ ಗಮನಕ್ಕೆ ತರುವುದು ಮತ್ತು ಪ್ರಶ್ನೆಪತ್ರಿಕೆಯ ಶ್ರೇಣಿಯು ತಮಗೆ ಹೊಂದುವ (ಅದೇ) ಪ್ರಶ್ನೆ ಪತ್ರಿಕೆಯಾದ ಮತ್ತು ಒ.ಎಂ.ಆರ್.ಉತ್ತರ ಹಾಳೆಯಲ್ಲಿ ಮುದ್ರಿತವಾಗಿರುವ ಶ್ರೇಣಿಯ ಪ್ರಶ್ನೆ ಪತ್ರಿಕೆಯನ್ನೇ ಪಡೆಯತಕ್ಕದ್ದು.**
3. ಪಕ್ಕದಲ್ಲಿ ಒದಗಿಸಿರುವ ಪ್ರಶ್ನೆಪತ್ರಿಕೆಯ ಚೌಕದಲ್ಲೇ ನಿಮ್ಮ ನೋಂದಣಿ ಸಂಖ್ಯೆಯನ್ನು ನಮೂದಿಸಬೇಕು. ಪ್ರಶ್ನೆ ಪುಸ್ತಿಕೆಯಲ್ಲಿ **ಬೇರೆ ಏನನ್ನೂ ಬರೆಯಬಾರದು.**

| ನೋಂದಣಿ ಸಂಖ್ಯೆ | | | | | | |
|---|---|---|---|---|---|---|
| | | | | | | |

4. **ಈ ಪ್ರಶ್ನೆ ಪುಸ್ತಿಕೆ 100 ಪ್ರಶ್ನೆಗಳನ್ನು ಒಳಗೊಂಡಿರುತ್ತದೆ.** ಪ್ರತಿಯೊಂದು ಪ್ರಶ್ನೆಯು **4** ಪ್ರತಿಕ್ರಿಯೆಗಳನ್ನು (ಉತ್ತರಗಳನ್ನು) ಒಳಗೊಂಡಿರುತ್ತದೆ. ನೀವು ಉತ್ತರ ಹಾಳೆಯಲ್ಲಿ ಗುರುತು ಮಾಡಬೇಕೆನಿಸುವ ಉತ್ತರವನ್ನು ಆಯ್ಕೆ ಮಾಡಿಕೊಳ್ಳಿ. ಒಂದು ವೇಳೆ ಅಲ್ಲಿ ಒಂದಕ್ಕಿಂತ ಹೆಚ್ಚು ಸರಿಯಾದ ಉತ್ತರಗಳಿವೆಯೆಂದು ನೀವು ಭಾವಿಸಿದರೆ ನಿಮಗೆ ಅತ್ಯುತ್ತಮವೆನಿಸುವ ಉತ್ತರಕ್ಕೆ ಗುರುತು ಮಾಡಿ. ಏನೇ ಆದರೂ ಪ್ರತಿ ಪ್ರಶ್ನೆಗೆ ನೀವು ಕೇವಲ ಒಂದು ಉತ್ತರವನ್ನು ಮಾತ್ರ ಆಯ್ಕೆ ಮಾಡಬೇಕು.
5. ಎಲ್ಲಾ ಉತ್ತರಗಳನ್ನು ನಿಮಗೆ ಒದಗಿಸಲಾಗಿರುವ ಪ್ರತ್ಯೇಕ ಒ.ಎಂ.ಆರ್. ಉತ್ತರ ಹಾಳೆಯ ಮೇಲೆ **ಕೇವಲ ಕಪ್ಪು ಅಥವಾ ನೀಲಿ ಶಾಯಿಯ ಬಾಲ್‌ಪಾಯಿಂಟ್ ಪೆನ್ನಿನಲ್ಲಿ ಮಾತ್ರ ಗುರುತು ಮಾಡಬೇಕು.** ಒ.ಎಂ.ಆರ್. ಉತ್ತರ ಪತ್ರಿಕೆ ಹಾಳೆಯಲ್ಲಿನ ವಿವರವಾದ ಸೂಚನೆಗಳನ್ನು ಗಮನಿಸುವುದು.
6. ಎಲ್ಲಾ ಪ್ರಶ್ನೆಗಳಿಗೆ ಸಮಾನ ಅಂಕಗಳು. **ಎಲ್ಲಾ ಪ್ರಶ್ನೆಗಳಿಗೆ ಉತ್ತರಿಸಿರಿ.** ಪ್ರತಿ ತಪ್ಪು ಉತ್ತರಕ್ಕೆ ಪ್ರಶ್ನೆಗೆ ನಿಗದಿಪಡಿಸಿದ ಅಂಕಗಳ ¼ (0·25) ರಷ್ಟು ಅಂಕಗಳನ್ನು ಕಳೆಯಲಾಗುವುದು.
7. ಚಿತ್ತು ಕೆಲಸಕ್ಕಾಗಿ ಹಾಳೆಗಳನ್ನು ಪ್ರಶ್ನೆ ಪುಸ್ತಿಕೆಯ ಕೊನೆಯಲ್ಲಿ ಸೇರಿಸಲಾಗಿದೆ. ಪ್ರಶ್ನೆ ಪುಸ್ತಿಕೆಯ ಇನ್ನುಳಿದ ಯಾವ ಭಾಗದಲ್ಲಿಯೂ ನೀವು ಯಾವ ರೀತಿಯ ಗುರುತನ್ನು ಮಾಡತಕ್ಕದ್ದಲ್ಲ.
8. ಪರೀಕ್ಷೆಯ ಮುಕ್ತಾಯವನ್ನು ಸೂಚಿಸುವ ಅಂತಿಮ ಗಂಟೆ ಬಾರಿಸಿದ ತಕ್ಷಣವೇ ಒ.ಎಂ.ಆರ್. ಉತ್ತರ ಪತ್ರಿಕೆ ಹಾಳೆಯಲ್ಲಿ ಇನ್ನಾವುದೇ ಗುರುತು ಮಾಡುವುದನ್ನು ನಿಲ್ಲಿಸಬೇಕು. ಸಂವೀಕ್ಷಕರು ಬಂದು ನಿಮ್ಮಲ್ಲಿರುವ ಒ.ಎಂ.ಆರ್. ಉತ್ತರ ಹಾಳೆಯನ್ನು ತಮ್ಮ ವಶಕ್ಕೆ ಪಡೆದುಕೊಂಡು ಲೆಕ್ಕಕ್ಕೆ ತೆಗೆದುಕೊಳ್ಳುವವರೆಗೂ ನಿಮ್ಮ ನಿಮ್ಮ ಆಸನದಲ್ಲಿಯೇ ಕುಳಿತಿರತಕ್ಕದ್ದು.

**ಯಾವುದೇ ರೀತಿಯ ಮೊಬೈಲ್ ಫೋನ್, ಕ್ಯಾಲ್‌ಕ್ಯುಲೇಟರ್ ಮತ್ತು ಇತರೆ ರೀತಿಯ ಎಲೆಕ್ಟ್ರಾನಿಕ್/ಕಮ್ಯೂನಿಕೇಷನ್ ಸಾಧನಗಳು ಇತ್ಯಾದಿಗಳನ್ನು ಪರೀಕ್ಷಾ ಕೇಂದ್ರದ ಆವರಣದೊಳಗೆ ತರುವುದನ್ನು ನಿಷೇಧಿಸಿದೆ.**

SHIKARAT



WWW.SHIKARAT.COM

SHIKARAT

SHIKARAT

# SPECIFIC PAPER - II
# TECHNICAL GROUP 'C'

**Examination held on 04-10-2018** **Subject Code: 297** **Total marks: 200**
**(10:00AM TO 12:00PM)** **Two marks for each question**

## KEY CHART
### Question Booklet Series - 'A'

| Question Number | Key Answer | Question Number | Key Answer | Question Number | Key Answer | Question Number | Key Answer |
|---|---|---|---|---|---|---|---|
| 1 | 1 | 26 | 1 | 51 | 3 | 76 | 3 |
| 2 | 4 | 27 | 2 | 52 | 2 | 77 | 3 |
| 3 | 2 | 28 | 2 | 53 | 2 | 78 | 2 |
| 4 | 4 | 29 | 2 | 54 | 1 | 79 | 4 |
| 5 | 2 | 30 | 2 | 55 | 2 | 80 | 3 |
| 6 | 3 | 31 | 2 | 56 | 2 | 81 | 2 |
| 7 | 3 | 32 | 2 | 57 | 3 | 82 | 1 |
| 8 | 3 | 33 | 3 | 58 | 2 | 83 | 3 |
| 9 | 4 | 34 | 4 | 59 | 1 | 84 | 3 |
| 10 | 3 | 35 | 2 | 60 | 3 | 85 | 2 |
| 11 | 1 | 36 | 3 | 61 | 2 | 86 | 2 |
| 12 | 1 | 37 | 3 | 62 | 2 | 87 | 2 |
| 13 | 2 | 38 | 3 | 63 | 3 | 88 | 3 |
| 14 | 3 | 39 | 3 | 64 | 1 | 89 | 4 |
| 15 | 4 | 40 | 2 | 65 | 1 | 90 | 4 |
| 16 | 2 | 41 | 1 | 66 | 4 | 91 | 1 |
| 17 | 3 | 42 | 1 | 67 | 2 | 92 | 3 |
| 18 | 2 | 43 | 1 | 68 | 3 | 93 | 3 |
| 19 | 3 | 44 | 3 | 69 | 4 | 94 | 2 |
| 20 | 4 | 45 | 1 | 70 | 3 | 95 | 3 |
| 21 | 3 | 46 | 3 | 71 | 1 | 96 | 2 |
| 22 | 2 | 47 | 4 | 72 | 4 | 97 | 4 |
| 23 | 1 | 48 | 3 | 73 | 2 | 98 | 1 |
| 24 | 2 | 49 | 4 | 74 | 2 | 99 | 3 |
| 25 | 3 | 50 | 3 | 75 | 1 | 100 | 1 |

SHIKARAT

1. ಹಲ್ಮಿಡಿ ಶಾಸನ ದೊರೆಯುವುದಕ್ಕಿಂತ ಮುನ್ನ ಇದನ್ನೇ ಕನ್ನಡದ ಮೊದಲ ಶಾಸನ ಎಂದು ಕರೆಯಲಾಗಿತ್ತು.

(1) ಮಂಗಲೇಶನ ಶಾಸನ

(2) ಸಿರಗುಂದದ ಶಾಸನ

(3) ಐಹೊಳೆ ಶಾಸನ

(4) ಬಾದಾಮಿ ಶಾಸನ

2. ಹಾಲರಾಜನ "ಗಾಥಾಸಪ್ತಶತಿ"ಯಲ್ಲಿ ಈ ಪದ ಪ್ರಯೋಗವಾಗಿಲ್ಲ.

(1) ಪೊಟ್ಟ

(2) ಅತ್ತಾ

(3) ತೀರ್

(4) ಆನ್ತು

3. ಗ್ರೀಕ್ ಪ್ರಹಸನವನ್ನು ಪರಿಶೋಧಿಸಿ ಅಲ್ಲಿಯ ಮಾತು ಕನ್ನಡವೆಂಬುದನ್ನು ತೋರಿಸಿದ ಸಂಶೋಧಕ.

(1) ಡಿ.ಎಲ್.ನರಸಿಂಹಾಚಾರ್

(2) ಗೋವಿಂದ ಪೈ

(3) ಎಂ.ಚಿದಾನಂದಮೂರ್ತಿ

(4) ಎಂ.ಎಚ್.ಕೃಷ್ಣ

4. ಗುಣವರ್ಮನ ಕೃತಿಗಳನ್ನು ಗುರುತಿಸಿ.

(1) ಗಜಾಷ್ಟಕ–ಸಿಂಹಾಷ್ಟಕ

(2) ಚೂಡಾಮಣಿ–ಮಹಾಮಣಿ

(3) ವರ್ಧಮಾನ ಚರಿತ–ಸೂಕ್ತಿಸುಧಾರ್ಣವ

(4) ಹರಿವಂಶ–ಶೂದ್ರಕ

5. ಯತಿಯನ್ನು ಕುರಿತು ಮೊತ್ತಮೊದಲು ಪ್ರಸ್ತಾಪಿಸಿರುವ ಕನ್ನಡದ ಶಾಸ್ತ್ರಗ್ರಂಥ.

(1) ಶಬ್ದಮಣಿದರ್ಪಣ

(2) ಕವಿರಾಜಮಾರ್ಗ

(3) ಆದಿಪುರಾಣ

(4) ಕರ್ನಾಟಕ ಕವಿಚರಿತೆ

6. 'ಕವಿಗಳ್ಗಿದು ಕಯ್ಗನ್ನಡಿ' ಎಂದು ಪ್ರಸಿದ್ಧಿ ಪಡೆದಿರುವ ಕನ್ನಡದ ಪ್ರಾಚೀನ ಶಾಸ್ತ್ರಗ್ರಂಥ.

(1) ಶಬ್ದಮಣಿದರ್ಪಣ

(2) ಛಂದೋಂಬುಧಿ

(3) ಕಾವ್ಯಾವಲೋಕನಂ

(4) ಅಷ್ಟಾಧ್ಯಾಯೀ

7. ಗಣಿತ ಪದ್ಧತಿಯನ್ನು ಅನುಸರಿಸಿ ರಚಿತವಾದ "ಸಿರಿಭೂವಲಯ" ಕೃತಿಯ ಕರ್ತೃವಿನ ಹೆಸರೇನು?

(1) ಅಸಗ

(2) ಲೋಕಪಾಲ

(3) ಕುಮುದೇಂದು

(4) ಶ್ರೀವಿಜಯ

8. "ಲಯ" ಯಾವುದರ ಮುಖ್ಯ ಅಂಗ?

(1) ಪ್ರಾಕೃತ

(2) ಮಾರ್ಗ

(3) ಛಂದಸ್ಸು

(4) ಸೂತ್ರಗಳು



WWW.SHIKARAT.COM

SHIKARAT

9. ಭರತನ ನಾಟ್ಯಶಾಸ್ತ್ರದಲ್ಲಿನ ಅಲಂಕಾರಗಳಾವುವು?

(1) ಉಪಮಾ, ದೀಪಕ, ಶಾಸ್ತ್ರ, ವರ್ಣ

(2) ರೂಪಕ, ಸತ್ವ, ಶಾಸ್ತ್ರ, ಉಪಮಾ

(3) ಯಮಕ, ವರ್ಣ, ನಾಟ್ಯ, ರೂಪಕ

(4) ಉಪಮಾ, ರೂಪಕ, ದೀಪಕ, ಯಮಕ

10. ಪಂಪ ತನ್ನ ಕಾವ್ಯದಲ್ಲಿ ಬಳಸಿದ ಕನ್ನಡದ ಪ್ರಭೇಧ ಯಾವುದು?

(1) ರಾಷ್ಟ್ರಕೂಟರ ಕನ್ನಡ

(2) ವೆಂಗಿಮಂಡಲದ ಕನ್ನಡ

(3) ಪುಲಿಗೆರೆಯ ತಿರುಳ್ಗನ್ನಡ

(4) 2ನೆಯ ಅರಿಕೇಸರಿಯ ಕನ್ನಡ

11. 'ಕತೆ ಪಿರಿದಾದೊಡಂ ಕತೆಯ ಮೆಯ್ಗೆಡಲೀಯದೆ ಮುಂ ಸಮಸ್ತ ಭಾರತ' ಎಂದು ಹೇಳಿದ ಕವಿ.

(1) ಪಂಪ

(2) ರನ್ನ

(3) ಪೊನ್ನ

(4) ಜನ್ನ

12. 'ಕರ್ಣಾಟ ವಿಷಯ ಭಾಷಾಜಾತಿ' – ಎಂದು ಹೆಸರಾದ ಛಂದಸ್ಸು ಈ ಗ್ರಂಥದಲ್ಲಿದೆ.

(1) ಛಂದೋಂಬುಧಿ

(2) ಛಂದೋವತಂಸ

(3) ಕವಿಜಿಹ್ವಾಬಂಧನ

(4) ಕಾವ್ಯಾವಲೋಕನ

13. ಅಷ್ಟಾದಶ ವರ್ಣನೆಗಳ ವಿಚಾರವನ್ನು ಮೊದಲು ಪ್ರಸ್ತಾಪಿಸಿದ ಮೀಮಾಂಸಕಾರ ಯಾರು?

(1) ಭಾಮಹ

(2) ದಂಡಿ

(3) ಭರತ

(4) ಆನಂದವರ್ಧನ

14. ನಾಗವರ್ಮನು ಹೇಳುವ ಮೆಲ್ವಾಡು ಯಾವ ಬಗೆಯೆಂದರೆ

(1) ಒನಕೆವಾಡು

(2) ಓವನಿಗೆ

(3) ಚತ್ತಾಣ

(4) ಬೆದಂಡೆ

15. ವಾದಿರಾಜರು ರಚಿಸಿರುವ 'ಲಾಕ್ಷಾಭರಣಿ' ಎನ್ನುವ ವ್ಯಾಖ್ಯಾನವು ಈ ಕೃತಿಯದಾಗಿದೆ.

(1) ರಾಮಾಯಣ

(2) ಭಾಗವತ

(3) ಗಿರಿಜಾಕಲ್ಯಾಣ

(4) ಮಹಾಭಾರತ

16. "ಸೋಹಂ ಎಂದೆನಿಸದೆ ದಾಸೋಹಂ ಎಂದೆನಿಸಯ್ಯಾ" ಎಂದು ಹೇಳಿದ ಶಿವಶರಣ.

(1) ಅಲ್ಲಮಪ್ರಭು

(2) ಬಸವಣ್ಣ

(3) ಸಿದ್ಧರಾಮ

(4) ದಾಸಿಮಯ್ಯ


WWW.SHIKARAT.COM
SHIKARAT
SHIKARAT

17. 1508 ರಲ್ಲಿ ಸೂಪಶಾಸ್ತ್ರ ಗ್ರಂಥವನ್ನು ರಚಿಸಿ ಪ್ರಸಿದ್ಧನಾದ ಕವಿ.

(1) ಒಂದನೇ ಮಂಗರಸ

(2) ಎರಡನೇ ಮಂಗರಸ

(3) ಮೂರನೇ ಮಂಗರಸ

(4) ನಾಲ್ಕನೇ ಮಂಗರಸ

18. ತಿಮ್ಮರಾಜಗೌಡನು ರಚಿಸಿದ ವೈದ್ಯ ಗ್ರಂಥದ ಹೆಸರು.

(1) ವ್ರಣ ವೈದ್ಯ

(2) ಸ್ತ್ರೀ ವೈದ್ಯ

(3) ಅಶ್ವ ವೈದ್ಯ

(4) ಬಾಲ ವೈದ್ಯ

19. 'ಶಿವತತ್ತ್ವಚಿಂತಾಮಣಿ' ಈ ಕೃತಿಯ ಕರ್ತೃ.

(1) ಭೀಮಕವಿ

(2) ತುರಂಗಕವಿ

(3) ಲಕ್ಕಣದಂಡೇಶ

(4) ಹರಿಹರ

20. 'ಪ್ರಗಾಥ' ವನ್ನು ಕನ್ನಡಕ್ಕೆ ಮೊದಲು ಪರಿಚಯಿಸಿದವರು.

(1) ಡಿ.ವಿ.ಜಿ.

(2) ಬೇಂದ್ರೆ

(3) ಗೋವಿಂದ ಪೈ

(4) ಬಿ.ಎಂ.ಶ್ರೀ.

21. 'ಮದನವತಿ' ಎಂಬುದು ಛಂದಸ್ಸಿನ ಈ ಪ್ರಕಾರ.

(1) ಅಕ್ಷರ ಛಂದಸ್ಸು

(2) ಮಾತ್ರಾ ಛಂದಸ್ಸು

(3) ಅಂಶ ಛಂದಸ್ಸು

(4) ಷಟ್ಪದಿಯ ಪ್ರಭೇದ

22. ಪ್ರಾಸದ ಬಗ್ಗೆ ಮೂರು ಬಗೆಯ 'ಳ' ಕಾರಗಳಿಗೆ ಬದಲಾಗಿ ಒಂದನ್ನೇ ರೂಢಿಸಿದವ.

(1) ರಾಘವಾಂಕ

(2) ಹರಿಹರ

(3) ಕೇಶಿರಾಜ

(4) ಭೀಮಕವಿ

23. ಅಕ್ಕಮಹಾದೇವಿಯ ಪ್ರಮುಖ ಕೃತಿ.

(1) ಯೋಗಾಂಗ ತ್ರಿವಿಧಿ

(2) ಸ್ವರವಚನಗಳು

(3) ಚನ್ನಮಲ್ಲಿಕಾರ್ಜುನ

(4) ತ್ರಿಪದಿಗಳು

24. ರಗಳೆ ಛಂದಸ್ಸಿಗೆ ಸಂಬಂಧಿಸಿದಂತೆ ಈ ಕೆಳಗಿನ ಯಾವ ಹೇಳಿಕೆ ಸರಿಯಾದುದು?

(1) ಇದರಲ್ಲಿ ಆದಿಪ್ರಾಸ ಕಡ್ಡಾಯ

(2) ಅಂತ್ಯಪ್ರಾಸ ಕಡ್ಡಾಯ

(3) ಎರಡೂ ಕಡ್ಡಾಯ

(4) ಎರಡೂ ಕಡ್ಡಾಯವಲ್ಲ


WWW.SHIKARAT.COM

SHIKARAT

## For more contact us

**WhatsApp No = 9742928829**

**Email ID= Admin@shikarat.com**

**Telegram Channel SHIKARAT.COM**
**https://telegram.me/s/shikarat**

**Facebook Page SHIKARAT.COM**
**https://www.facebook.com/shikarat/**

**Instagram SHIKARAT.COM**
**https://www.instagram.com/shikarat_com/**

**Twitter SHIKARAT.COM**
**https://twitter.com/Shikarat_com**

SHIKARAT

💞 **Sharing is Caring** 💞

😍**If it is helpful Please Share with your friends**😍

25. ಉಗಾಭೋಗ ಮತ್ತು ಸುಳಾದಿಗಳು ಕಂಡುಬರುವುದು ________

(1) ಜೈನ ಸಾಹಿತ್ಯದಲ್ಲಿ

(2) ವೀರಶೈವ ಸಾಹಿತ್ಯದಲ್ಲಿ

(3) ದಾಸ ಸಾಹಿತ್ಯದಲ್ಲಿ

(4) ಷಟ್ಪದಿ ಸಾಹಿತ್ಯದಲ್ಲಿ

26. ಪಂಪನ ಆದಿಪುರಾಣದಲ್ಲಿರುವ ಈ ಪ್ರಸಂಗ ಹಸ್ತಿಮಲ್ಲನ ಪೂರ್ವಪುರಾಣದಲ್ಲಿಲ್ಲ.

(1) ಭರತನ ಗರ್ವಭಂಗದ ಪ್ರಸಂಗ

(2) ನೀಲಾಂಜನೆಯ ನೃತ್ಯಪ್ರಸಂಗ

(3) ಶ್ರೀಮತಿ–ವಜ್ರಜಂಘರ ಸಾವಿನ ಪ್ರಸಂಗ

(4) ಎಲ್ಲವೂ

27. ಪ್ರಬಂಧ ಸಾಹಿತ್ಯದ ನೇತಾರ ________

(1) ಹಗ್ ವಾಕರ್

(2) ಲಾರ್ಡ್ ಬೇಕನ್

(3) ಜಾನ್ಸನ್

(4) ರಾಫೆಲ್

28. ಸಾರ್ತ್ರ ಮತ್ತು ಹೈಡೆಗರ್ ಪ್ರತಿನಿಧಿಸುವ ಅಸ್ತಿತ್ವವಾದವು.

(1) ಕ್ರಿಶ್ಚಿಯನ್ ಅಸ್ತಿತ್ವವಾದ

(2) ನಿರೀಶ್ವರ ಅಸ್ತಿತ್ವವಾದ

(3) ಕ್ರಿಯಾ ಅಸ್ತಿತ್ವವಾದ

(4) ಈಶ್ವರ ಅಸ್ತಿತ್ವವಾದ

29. ಇಂಗ್ಲೀಷ್‌ನ 'BALLAD' (ಬ್ಯಾಲೆಡ್) ಗೆ ಸಂವಾದಿಯಾದ ಕನ್ನಡ ಕಾವ್ಯ ಪ್ರಕಾರ.

(1) ಭಾವಗೀತೆ

(2) ಕಥನಕಾವ್ಯ

(3) ಮಹಾಕಾವ್ಯ

(4) ಲಾವಣಿ

30. 'ಪ್ರೀತಿ ಇಲ್ಲದ ಮೇಲೆ' ಕವಿತೆಯನ್ನು ಬರೆದವರು.

(1) ನಿಸಾರ್ ಅಹಮದ್

(2) ಜಿ.ಎಸ್. ಶಿವರುದ್ರಪ್ಪ

(3) ಚೆನ್ನವೀರ ಕಣವಿ

(4) ಬೇಂದ್ರೆ

31. 'The Speaking of Shiva' ಅನುವಾದಿತ ವಚನಗಳ ಕೃತಿಯನ್ನು ರಚಿಸಿದವರು.

(1) ಪಿ. ಲಂಕೇಶ್

(2) ಎ.ಕೆ. ರಾಮಾನುಜನ್

(3) ಯು.ಆರ್. ಅನಂತಮೂರ್ತಿ

(4) ಎಂ.ಎಂ. ಕಲಬುರ್ಗಿ

32. ಕನ್ನಡ ನವೋದಯದ ಮುಖ್ಯ ಲಕ್ಷಣಗಳಲ್ಲಿ ಈ ಅಂಶವನ್ನು ಸೇರಿಸಲಾಗುವುದಿಲ್ಲ.

(1) ರಮ್ಯತೆ ಮತ್ತು ಕಲ್ಪನಾಮಯತೆ

(2) ವ್ಯಕ್ತಿ ವಿಶಿಷ್ಟತೆ

(3) ಆದರ್ಶವಾದ

(4) ಪ್ರಕೃತಿ ವರ್ಣನೆ


WWW.SHIKARAT.COM

SHIKARAT

33. ಅಸ್ತಿತ್ವವಾದೀ ಪರಿಕಲ್ಪನೆಯೊಂದಿಗೆ ರಚಿತವಾದ ಕನ್ನಡ ನಾಟಕ ಯಾವುದು?

(1) ವಿಗಡ ವಿಕ್ರಮರಾಯ

(2) ಮಂಟೇಸ್ವಾಮಿ ಕಥಾಪ್ರಸಂಗ

(3) ತೆರೆಗಳು

(4) ಶೋಕಚಕ್ರ

34. 'ಖಡ್ಗವಾಗಲಿ ಕಾವ್ಯ ಜನರ ನೋವಿಗೆ ಮಿಡಿವ ಪ್ರಾಣಮಿತ್ರ' ಈ ಹೇಳಿಕೆಯನ್ನು ಬಂಡಾಯ ಸಾಹಿತ್ಯ ಸಂಘಟನೆಗಾಗಿ ರೂಪಿಸಿಕೊಟ್ಟವರು ಯಾರು?

(1) ಡಾ. ಸಿದ್ದಲಿಂಗಯ್ಯ

(2) ಪ್ರೊ.ಬಿ.ಕೃಷ್ಣಪ್ಪ

(3) ಜಾಣಗೆರೆ ವೆಂಕಟರಾಮಯ್ಯ

(4) ಡಾ. ಡಿ.ಆರ್. ನಾಗರಾಜ್

35. ಕನ್ನಡದ ಮೊದಲ ಸಾಮಾಜಿಕ ಕಾದಂಬರಿ ಯಾವುದು?

(1) ವಾಗ್ದೇವಿ

(2) ಇಂದಿರಾಬಾಯಿ

(3) ಇಂದಿರೆ

(4) ಕುಮುದಿನಿ

36. ನಗರದ ಬದುಕು ಮತ್ತು ಆಧುನಿಕತೆಗಳ ವಸ್ತುವನ್ನು ಕುರಿತು ಬರೆದಿರುವ ಲೇಖಕರು ಯಾರು?

(1) ಗೊರೂರು ರಾಮಸ್ವಾಮಿ ಅಯ್ಯಂಗಾರ್

(2) ಮಾಸ್ತಿ ವೆಂಕಟೇಶ ಅಯ್ಯಂಗಾರ್

(3) ಯಶವಂತ ಚಿತ್ತಾಲ

(4) ರಾವ್ ಬಹದ್ದೂರ್

37. 'ಹುಚ್ಚುಮನಸ್ಸಿನ ಹತ್ತು ಮುಖಗಳು' ಮತ್ತು 'ಹುಳಿಮಾವಿನ ಮರ' – ಈ ಎರಡು ಆತ್ಮಕತೆಗಳನ್ನು ರಚಿಸಿದ ಲೇಖಕರು ಯಾರು?

(1) ಮಾಸ್ತಿ–ಡಿ.ವಿ.ಗುಂಡಪ್ಪ

(2) ಬಿ.ವಿ.ಕಾರಂತ–ಸಿ.ಜಿ. ಕೃಷ್ಣಸ್ವಾಮಿ

(3) ಶಿವರಾಮ ಕಾರಂತ–ಪಿ.ಲಂಕೇಶ್

(4) ಚದುರಂಗ–ಭೈರಪ್ಪ

38. ಮೊಗಳ್ಳಿ ಗಣೇಶ ಅವರು ಯಾವ ಸಾಹಿತ್ಯ ಪಂಥಕ್ಕೆ ಸೇರಿದ ಕತೆಗಾರರು?

(1) ನವ್ಯ ಸಾಹಿತ್ಯ

(2) ಪ್ರಗತಿಶೀಲ ಸಾಹಿತ್ಯ

(3) ದಲಿತ ಸಾಹಿತ್ಯ

(4) ನವೋದಯ ಸಾಹಿತ್ಯ

39. ಸು.ರಂ. ಎಕ್ಕುಂಡಿಯವರು ________ ಮಾದರಿಯ ಕವನಗಳಿಗೆ ಪ್ರಸಿದ್ಧರಾಗಿದ್ದಾರೆ.

(1) ಐತಿಹಾಸಿಕ ಕವನ

(2) ಬಂಡಾಯ ಕವನ

(3) ಕಥನ ಕವನ

(4) ಜನಪದೀಯ ಕವನ

40. ಬೀಚಿಯವರು ಸೃಷ್ಟಿಸಿದ ಜನಪ್ರಿಯ ಪಾತ್ರ ________

(1) ತಿಮ್ಮ

(2) ತಿಂಮ

(3) ತಿಮ್ಮಪ್ಪ

(4) ತಿಂಮಪ್ಪ

SHIKARAT


WWW.SHIKARAT.COM
SHIKARAT

41. ________ ಇವರು 'ದೇವರುಗಳ ರಾಜ್ಯದಲ್ಲಿ' ಎಂಬ ಕಥಾಸಂಕಲನವನ್ನು ಪ್ರಕಟಿಸಿದ್ದಾರೆ.

(1) ಬೊಳುವಾರು ಮಹಮದ್ ಕುಂಞ

(2) ಫಕೀರ್ ಮಹಮದ್ ಕಟ್ಪಾಡಿ

(3) ಅಬ್ದುಲ್ ರಶೀದ್

(4) ರಹಮತ್ ತರೀಕೆರೆ

42. 'ವಿಶ್ವಭಾರತಿಗೆ ಕನ್ನಡದಾರತಿ' ಕವನ ರಚಿಸಿದವರು ________

(1) ಚೆನ್ನವೀರ ಕಣವಿ

(2) ಕೆ.ಎಸ್.ನಿಸಾರ್ ಅಹಮದ್

(3) ಸಿದ್ಧಯ್ಯ ಪುರಾಣಿಕ್

(4) ಹುಯಿಲಗೋಳ ನಾರಾಯಣರಾಯ

43. ರುದ್ರಟನ 'ಲಾಟಿಯ' ಎಂಬುದು ___ ಆಗಿದೆ.

(1) ರೀತಿ

(2) ಗುಣ

(3) ಔಚಿತ್ಯ

(4) ರಸ

44. 'ನಾರಿ ದಾರಿ ದಿಗಂತ' ಕೃತಿಯ ಕರ್ತೃ

(1) ಕೇಶವಶರ್ಮಾ

(2) ಗಾಯತ್ರಿ .ಎನ್.

(3) ವಿಜಯಾ ದಬ್ಬೆ

(4) ಸುಮಿತ್ರಾಬಾಯಿ

45. ಪುರಾಣ ಪ್ರತೀಕ ವಿಮರ್ಶೆಯ ಪಂಥ ಸ್ಥಾಪಕ

(1) ಸಿ.ಜೆ. ಯೂಂಗ್

(2) ಎಜ್ರಾಪೌಂಡ್

(3) ಕೋಲ್‌ರಿಜ್

(4) ರೋಲ್ಯಾಂಡ್ ಬಾರ್ಥ್

46. "ರುದ್ರನಾಟಕದ ಗುರಿ ಭಾವಗಳ ಶೋಧನೆ" ಎಂದವನು

(1) ಸಾಕ್ರಟೀಸ್

(2) ಪ್ಲೇಟೊ

(3) ಅರಿಸ್ಟಾಟಲ್

(4) ಹೊರೇಸ್

47. ವಿಭಾನುಭಾವ ವ್ಯಭಿಚಾರಿ ಸಂಯೋಗಾತ್________

(1) ಧ್ವನಿ ನಿಷ್ಪತ್ತಿಃ

(2) ವರ್ಣ ನಿಷ್ಪತ್ತಿಃ

(3) ಭಾವ ನಿಷ್ಪತ್ತಿಃ

(4) ರಸ ನಿಷ್ಪತ್ತಿಃ

48. ಕ್ಷೇಮೇಂದ್ರನ ತತ್ತ್ವ ವಿಚಾರ ________

(1) ಕ್ರಮಭೇದ

(2) ರೀತಿ

(3) ಔಚಿತ್ಯ ವಿಚಾರ

(4) ಪ್ರಕ್ರಮಭೇದ

49. "ಅಪಾರೇ ಕಾವ್ಯಸಂಸಾರೇ ಕವಿರೇವ ಪ್ರಜಾಪತಿಃ" ಎಂದು ಹೇಳಿದ ಮೀಮಾಂಸಕ

(1) ರಾಜಶೇಖರ

(2) ಮಮ್ಮಟ

(3) ಭಾಮಹ

(4) ಆನಂದವರ್ಧನ


WWW.SHIKARAT.COM
SHIKARAT
SHIKARAT

50. ಮೀಮಾಂಸಕರನ್ನೂ, ಅವರ ಕೃತಿಗಳನ್ನೂ ಹೊಂದಿಸಿ.

(1) (ಎ) ಕುಂತಕ – ರಸಗಂಗಾಧರ
(ಬಿ) ಜಗನ್ನಾಥ – ವಕ್ರೋಕ್ತಿಜೀವಿತ
(ಸಿ) ಮಮ್ಮಟ – ಕಾವ್ಯಾದರ್ಶ
(ಡಿ) ದಂಡಿ – ಕಾವ್ಯಪ್ರಕಾಶ

(2) (ಎ) ಕುಂತಕ – ಕಾವ್ಯಪ್ರಕಾಶ
(ಬಿ) ಜಗನ್ನಾಥ – ಕಾವ್ಯಾದರ್ಶ
(ಸಿ) ಮಮ್ಮಟ – ರಸಗಂಗಾಧರ
(ಡಿ) ದಂಡಿ – ವಕ್ರೋಕ್ತಿಜೀವಿತ

(3) (ಎ) ಕುಂತಕ – ವಕ್ರೋಕ್ತಿಜೀವಿತ
(ಬಿ) ಜಗನ್ನಾಥ – ರಸಗಂಗಾಧರ
(ಸಿ) ಮಮ್ಮಟ – ಕಾವ್ಯಪ್ರಕಾಶ
(ಡಿ) ದಂಡಿ – ಕಾವ್ಯಾದರ್ಶ

(4) (ಎ) ಕುಂತಕ – ಕಾವ್ಯಾದರ್ಶ
(ಬಿ) ಜಗನ್ನಾಥ – ಕಾವ್ಯಪ್ರಕಾಶ
(ಸಿ) ಮಮ್ಮಟ – ವಕ್ರೋಕ್ತಿಜೀವಿತ
(ಡಿ) ದಂಡಿ – ರಸಗಂಗಾಧರ

51. ಪ್ರಭು ಸಮ್ಮಿತವು ಶಬ್ದ ಪ್ರಧಾನ, ಮಿತ್ರ ಸಮ್ಮಿತವು ಅರ್ಥ ಪ್ರಧಾನ, ಕಾಂತಾ ಸಮ್ಮಿತವು ________ ಪ್ರಧಾನ.

(1) ಧ್ವನಿ
(2) ಸ್ನೇಹ
(3) ರಸ
(4) ಮಾಧುರ್ಯ

52. ನಮ್ಮ ಆಲಂಕಾರಿಕರ ಪ್ರಕಾರ ಕವಿತ್ವದ ಬೀಜ ________

(1) ಪಾಂಡಿತ್ಯ
(2) ಪ್ರತಿಭೆ
(3) ಅಭ್ಯಾಸ
(4) ದೈವಕೃಪೆ

53. "ಹಚ್ಚನೆ ಪಚ್ಚನೆ ವೇದಿಕೆಯಲ್ಲಿ
ಸಾಸಿರಗಟ್ಟಲೆ ಮುತ್ತನು ಚೆಲ್ಲಿ
ರನ್ನದ ಕಿರುಹಣತೆಗಳಲ್ಲಿ
ಶ್ಯಾಮಲ ತೈಲದಿ ಹೊನ್ನಿನ ಬತ್ತಿ
ಕಾಮನ ಬಿಲ್ಲಿನ ಬೆಂಕಿಯು ಹೊತ್ತಿ
ಸೊಡರುರಿಯುತಿದೆ ಅಲ್ಲಲ್ಲಿ"

ಈ ವರ್ಣನೆಯಲ್ಲಿ ಪಾಶ್ಚಾತ್ಯ ಮೀಮಾಂಸಕರ ಅಭಿಮತದಂತೆ ಯಾವ ಬಗೆಯ ನಿರ್ಮಾಣ ಪ್ರತಿಭೆ ಕಾಣುತ್ತಿದೆ?

(1) ಪ್ರತೀಕಾತ್ಮಕ ಪ್ರತಿಭೆ
(2) ಖಚಿತಾಕಾರ ನಿರ್ಮಾಣ ಪ್ರತಿಭೆ
(3) ಅಸ್ಪಷ್ಟತಾಕಾರ ನಿರ್ಮಾಣ ಪ್ರತಿಭೆ
(4) ಈ ಯಾವುದೂ ಅಲ್ಲ.

54. ಕಾವ್ಯದಲ್ಲಿ ಶಬ್ದಾರ್ಥವು ಮುಖ್ಯವಾಗಿ ವಾಚ್ಯದ ನೆಲೆಯಲ್ಲಿದ್ದರೆ ಅದಕ್ಕೆ ________ ಎಂದೂ ಹೆಸರು.

(1) ಅಭಿಧಾ ವೃತ್ತಿ
(2) ಲಕ್ಷಣಾ ವೃತ್ತಿ
(3) ವ್ಯಂಜನಾ ವೃತ್ತಿ
(4) ಈ ಯಾವುದೂ ಅಲ


WWW.SHIKARAT.COM

SHIKARAT

55. ಸಮಾಸಗಳಿಂದ ಇಡಿಕಿರಿದು ಗಂಟುಗಂಟಾಗಿರುವ ಗದ್ಯ ಶೈಲಿ ________

(1) ಮುಕ್ತಕ
(2) ಉತ್ಕಲಿಕಾ ಪ್ರಾಯ
(3) ವೃತ್ತ ಗಂಧಿ
(4) ಚೂರ್ಣಿಕಾ

56. ವೈದರ್ಭಿ, ಗೌಡಿ, ಪಾಂಚಾಲಿ, ಮಾಗಧಿ ಮುಂತಾದವು ________

(1) ಪ್ರಾದೇಶಿಕ ಸ್ಥಳನಾಮಗಳು
(2) ರೀತಿಯ ಪ್ರಭೇದಗಳು
(3) ಸಂಚಾರಿ ಭಾವಗಳು
(4) ಅಲಂಕಾರಗಳು

57. ಪ್ರಸಾದ, ಮಾಧುರ್ಯ, ಓಜಸ್ಸು ಮುಂತಾದವು ________

(1) ಕಾವ್ಯದ ಬಗೆಗಳು
(2) ಕಾವ್ಯದ ಆಯಾಮಗಳು
(3) ಕಾವ್ಯದ ಗುಣಗಳು
(4) ಕಾವ್ಯದ ಮಿತಿಗಳು

58. "ಮುನಿಯ ಮಾತಿನಬಲೆಗೆ ಸಿಲುಕಿತು ಜನಪತಿಯ ಚೈತನ್ಯಮೃಗ" ಇಲ್ಲಿ ಬಳಕೆಯಾಗಿರುವ ಅಲಂಕಾರ

(1) ಉಪಮೆ
(2) ರೂಪಕ
(3) ದೀಪಕ
(4) ಉತ್ಪ್ರೇಕ್ಷೆ

59. ಅಸದಾಖ್ಯಾತಿ, ಸದ್ಕೀರ್ತನ, ನಿಯಮ, ಐಕ್ಯಗಳು ________ ದ ವಿವಿಧ ಪ್ರಕಾರಗಳು.

(1) ಕವಿಸಮಯ
(2) ಕ್ಲಿಷ್ಟಗದ್ಯ
(3) ನಾಟಕ
(4) ಲೋಕಸತ್ಯ

60. 'ವ್ಯುತ್ಪತ್ತಿ' ಎಂದರೆ ________

(1) ಕಾವ್ಯ ಉತ್ಪತ್ತಿಯಾಗುವುದು ಹೇಗೆಂಬ ವಿವರ.
(2) ಕಾವ್ಯ ರಚನೆಗೆ ಒದಗುವ ವಿಪತ್ತುಗಳು.
(3) ಅನೇಕ ವಿಷಯಗಳ ಬಗೆಗಿನ ಕವಿಯ ತಿಳುವಳಿಕೆ.
(4) ಈ ಮೇಲಿನ ಯಾವುದೂ ಅಲ್ಲ.

61. ತನ್ನ 'ಆದರ್ಶರಾಜ್ಯ' ದಲ್ಲಿ ಕವಿಗೆ ಜಾಗವೇ ಇಲ್ಲ, ಅವನನ್ನು ಹೊರಗೆ ಕಳಿಸಬೇಕು ಎಂದು ಹೇಳಿದವನು.

(1) ಅರಿಸ್ಟಾಟಲ್
(2) ಪ್ಲೇಟೋ
(3) ಹೊರೇಸ್
(4) ಈ ಮೇಲಿನ ಯಾರೂ ಅಲ್ಲ.

62. 'ತೌಲನಿಕ ಕಾವ್ಯಮೀಮಾಂಸೆ' ಎಂಬ ಪ್ರಸಿದ್ಧ ಕೃತಿಯ ಲೇಖಕರು.

(1) ಜಿ.ಎಸ್. ಶಿವರುದ್ರಪ್ಪ
(2) ತಿಪ್ಪೇರುದ್ರಸ್ವಾಮಿ
(3) ಇನಾಂದಾರ್
(4) ನಾಗಭೂಷಣಸ್ವಾಮಿ


WWW.SHIKARAT.COM
SHIKARAT

63. ರಸ ಸಿದ್ಧಾಂತದಲ್ಲಿ 'ಚಿತ್ರತುರಗನ್ಯಾಯ' ಪರಿಕಲ್ಪನೆಯನ್ನು ಮಂಡಿಸಿದವರು.

(1) ಭರತ

(2) ಲೊಲ್ಲಟ

(3) ಶ್ರೀಶಂಕುಕ

(4) ಭಟ್ಟನಾಯಕ

64. 'ಅಲಂಕಾರಕ್ಕೆ ಕಾವ್ಯದಲ್ಲಿ ನಿಯತವಾದ ಸ್ಥಾನವಿರಲೇಬೇಕಾಗಿಲ್ಲ' ಎಂದು ತಿಳಿಸಿದ ಅಲಂಕಾರಿಕ

(1) ಮಮ್ಮಟ

(2) ಕುಂತಕ

(3) ರುದ್ರಟ

(4) ಭಾಮಹ

65. ಸ್ತ್ರೀ ನಿಷ್ಠ ಚಿಂತನೆಯ ಪ್ರಾರಂಭವನ್ನು ಸಾಹಿತ್ಯಿಕ ಇತಿಹಾಸಕಾರರು ಇವರ ಮೂಲಕ ಗುರುತಿಸುತ್ತಾರೆ.

(1) ಮೇರಿವರ್ಟಲಿ ಮಾಂಟೇಗೊ – ಮೇರಿವುಲ್‌ಸ್ಟನ್ ಕ್ರಾಫ್ಟ್

(2) ಸಿಮೋನ್‌ದ ಬೋವಾ – ಕೇಟ್ ಮಿಲೇಟ್

(3) ಜೂಲಿಯ ಕ್ರಿಸ್ಟೇವ – ಎಲೇನ್ ಶೋ ವಾಲ್ಟರ್

(4) ವರ್ಜಿನಿಯಾ ವುಲ್ಫ್ – ಜರ್ಮನ್ ಗ್ರಿಯರ್

66. "ಆಗಳ್ ಬಾಳ್ ನಿಮಿರ್ದುದು ತೋಳ್ ತೂಗಿದುದು" ಎಂಬ ಮಾತು ಯಾವ ಕೃತಿಯಲ್ಲಿ ಬಂದಿದೆ?

(1) ಪಂಪಭಾರತ

(2) ಗದಾಯುದ್ಧ

(3) ಕಾದಂಬರಿ

(4) ಯಶೋಧರ ಚರಿತೆ

67. ನಂದನನು ನಂದನಲ್ಲ ಎನಿಸುವೆನು, ಸುಬಂಧುವನು ಬಂಧುವಲ್ಲ ಎನಿಸುವೆನು ಎಂದು ಪ್ರತಿಜ್ಞೆ ಮಾಡಿದವರು

(1) ಕುಮುದ

(2) ಚಾಣಕ್ಯ

(3) ಸೋಮಶರ್ಮ

(4) ಸನತ್ಕುಮಾರ

68. ಆದಿಪುರಾಣದ ಪ್ರಕಾರ ಭರತನು ದಿಗ್ವಿಜಯವನ್ನು ಪೂರೈಸಲು ತೆಗೆದುಕೊಂಡ ವರ್ಷಗಳು

(1) ಇಪ್ಪತ್ನಾಲ್ಕು ಸಾಸಿರ

(2) ಹನ್ನೆರಡು ಸಾಸಿರ

(3) ಅರವತ್ತು ಸಾಸಿರ

(4) ಆರು ಸಾಸಿರ

69. 'ಪುಳಿಂದ' ಪದದ ಅರ್ಥವೇನು?

(1) ಮರಳು

(2) ಚಮ್ಮಾರ

(3) ಕಮ್ಮಾರ

(4) ಬೇಡ

SHIKARAT


WWW.SHIKARAT.COM
SHIKARAT

70. 'ಚಿತ್ರಮಪಾತ್ರೇ ರಮತೇ ನಾರೀ ಎಂಬುದು ಸಮನಿಸಿದುದು ಬೆಂದ ಬಿದಿಗೆ ಕಣ್ಣಿಲ್ಲಕ್ಕುಂ' ಎಂದು ಜನ್ನ ಯಾರನ್ನು ಕುರಿತು ವರ್ಣಿಸಿದ್ದಾನೆ?

(1) ಚಂದ್ರಮತಿ

(2) ಅಭಯಮತಿ

(3) ಅಮೃತಮತಿ

(4) ದೂದವಿ

71. ಚತುರ್ವರ್ಗ ಉಪಸರ್ಗಗಳು ಯಾವುವು?

(1) ದೇವ, ತಿರ್ಯಕ್, ಮಾನವ, ಅಚೇತನ

(2) ವಾನರ, ದಾನವ, ದೇವ, ಅಚೇತನ

(3) ದಾನವ, ಮಾನವ, ವಾನರ, ದೇವ

(4) ಈ ಮೇಲಿನ ಯಾವುವೂ ಅಲ್ಲ.

72. ವಿರಾಟ ಪರ್ವ ಭಾಗದಲ್ಲಿ "ಒಡಲು ಮತ್ತು ನೆಳಲು ಎರಡೂ ಒಟ್ಟಿಗೆ ಇರುತ್ತವಲ್ಲದೆ ಬೇರ್ಪಡಿಸಲು ಸಾಧ್ಯವಿಲ್ಲ. ನೀವೇ ನಮಗೆ ಜೀವಾತ್ಮರು" ಎಂದು ಈ ಕೆಳಗೆ ಕೊಟ್ಟಿರುವ ಉತ್ತರಗಳಲ್ಲಿ ಯಾರನ್ನು ಕುರಿತು ಹೇಳುವ ಮಾತು ______

(1) ಕೃಷ್ಣ

(2) ಭೀಷ್ಮ

(3) ದ್ರೋಣ

(4) ಧರ್ಮರಾಯ

73. ಮೊಸರಿಲ್ಲದ ಊಟ ! ಕೆಸರಿಲ್ಲದ ಮಳೆಯು ! ಅಂದವಿಲ್ಲದ ಊಟ ! ______ ಸರ್ವಜ್ಞನ ಈ ವಚನವನ್ನು ಸರಿ ಉತ್ತರದಿಂದ ಪೂರ್ಣಗೊಳಿಸಿ.

(1) ಗುಯ್ಯಲಿಲ್ಲದ ತೋಟ

(2) ಹಂದರಿಲ್ಲದ ಮದುವೆ

(3) ಕಂದನಿಲ್ಲದ ಮನೆ

(4) ಕಂದನಿಲ್ಲದ ಮನಸು

74. "ತನು ಬೆತ್ತಲೆಯಾದಡೇನು ಮನ ಬೆತ್ತಲೆಯಾಗದನ್ನಕ್ಕ? ವ್ರತವಿದ್ದಡೇನು, ವ್ರತಹೀನರಾದ ಬಳಿಕ? ನೆರೆದಡೆ ನರಕವಯ್ಯಾ ನಿಂಬೇಶ್ವರಾ" – ಈ ವಚನದ ಕರ್ತೃ ______

(1) ಸೂಳೆ ಸಂಕವ್ವೆ

(2) ಗುಡ್ಡವ್ವೆ

(3) ಕಾಳವ್ವೆ

(4) ಗೊಗ್ಗವ್ವೆ

75. ಹರಿಹರನ ತಾಯಿಯ ಹೆಸರೇನು?

(1) ಶರ್ವಾಣಿ

(2) ರುದ್ರಾಣಿ

(3) ಕಲ್ಯಾಣಿ

(4) ಗೀರ್ವಾಣಿ

SHIKARAT


WWW.SHIKARAT.COM
SHIKARAT

76. ಭರತನ ಕಿರುಬೆರಳಿಗೆ ಚಿನ್ನದ ಸರಪಳಿಯನ್ನು ತಯಾರಿಸಿದವರು.

(1) ಅರ್ಕಕೀರ್ತಿ

(2) ಬಾಹುಬಲಿ

(3) ವಿಶ್ವಕರ್ಮ

(4) ಯಂತ್ರಸಿದ್ಧರು

77. "ಎಲ್ಯಾಡಿ ಬಂದ್ಯೋ ಎನ್ನ ರಂಗಯ್ಯ" ಕೀರ್ತನೆಯಲ್ಲಿ ವ್ಯಕ್ತವಾದ ಭಾವ ________

(1) ಸ್ನೇಹ

(2) ಶತ್ರು

(3) ವಾತ್ಸಲ್ಯ

(4) ಆಕ್ಷೇಪ

78. ಒಗಟಿನ ರೂಪದಲ್ಲಿರುವ ಕೀರ್ತನೆಗಳನ್ನು ಈ ಹೆಸರಿನಿಂದ ಕರೆಯುತ್ತಾರೆ.

(1) ಉಗಾಭೋಗ

(2) ಮುಂಡಿಗೆ

(3) ಸುಳಾದಿ

(4) ದಂಡಕ

79. ತತ್ವವೆಂಬುದು ಸರ್ವಜ್ಞನ ಪ್ರಕಾರ

(1) ಹಿಮಾಲಯದಷ್ಟು ಎತ್ತರ

(2) ಸಮುದ್ರದಂತೆ ಆಳ

(3) ಆಕಾಶದಂತೆ ಅನಂತ

(4) ಹಿತ್ತಿಲ ಗಿಡದಷ್ಟು ಹತ್ತಿರ

80. 'ಕನ್ನಡ ಜನಪದದ ಸಂದರ್ಭದಲ್ಲಿ ನಮ್ಮ ಮಹತ್ವದ ಕೃತಿಗಳೆಲ್ಲವೂ ಜಾತ್ಯಾತೀತ ರಚನೆಗಳು' ಈ ಮಾತು ಇರುವ ಲೇಖನ ________

(1) ಸಂಸ್ಕೃತಿ ಕಹಳೆಗೆ ನಾಂದಿ

(2) ಸಾಹಿತ್ಯದಲ್ಲಿ ಬ್ರಾಹ್ಮಣ ಮತ್ತು ಶೂದ್ರ

(3) ಜಾನಪದ ಸಾಹಿತ್ಯ ಮತ್ತು ಆಧುನಿಕ ಸಾಹಿತ್ಯ

(4) ಆತ್ಮಕಥನ; ವಾಗ್ವಾದ ಮತ್ತು ಸಂವಾದ

81. "ವರ್ಣಗಳಲಿ ಭೇದ ಕಂಡು ಕನಲಿದ ಹುಡುಗ
ಎಲ್ಲ ಬಣ್ಣಗಳ ಕಲಿಸಿ ಒಂದು ಮಾಡುವೆನೆಂದ
ಕಪ್ಪು ಕತ್ತಲೆ ಸೀಳಿ ಬೆಳಕು ಮಾಡುವ ಮೊದಲು
ಕಾಡಿನ ಹಾದಿ ತಿಳಿಯದೆ ಬಳಲಿದ
ಕಂದು ಬಣ್ಣದ ಕುದುರೆ ಏರಿ ಮಾಯವಾದ"
'ಶ್ರೀಕೃಷ್ಣ ಸ್ಮರಣೆ' ಎನ್ನುವ ಈ ಕವಿತೆಯ ಕವಿಯಿತ್ರಿ.

(1) ಹಾ.ಮ. ಕನಕ

(2) ಪ್ರತಿಭಾ ನಂದಕುಮಾರ

(3) ಬಿ.ಟಿ. ಲಲಿತಾ ನಾಯ್ಕ

(4) ನಳಿನೀ ದೇಶಪಾಂಡೆ

82. ಚದುರಂಗರ ನಾಲ್ಕು ಮೊಳ ಭೂಮಿ ಕಥೆಯ ಸಂದೇಶವೇನು?

(1) ಸತ್ಯಮೇವ ಜಯತೇ

(2) ಪ್ರಾಮಾಣಿಕತೆಯ ದರ್ಶನ

(3) ಅನ್ಯಾಯದ ರುದ್ರನರ್ತನ

(4) ಮಾನವೀಯತೆಯ ಸಾಕಾರ


WWW.SHIKARAT.COM

SHIKARAT

**83.** 'ಮೂರುದಾರಿಗಳು' ಕಾದಂಬರಿಯ ಕೇಂದ್ರ ವ್ಯಕ್ತಿ ________

(1) ತುಳಸಿ

(2) ಗೋದಾವರಿ

(3) ನಿರ್ಮಲಾ

(4) ತಾರಾ

**84.** "ನಾನು ದೇಶಕ್ಕೆ ಮದ್ದು ಕೊಡೊ ಹಕೀಮನಲ್ಲ ಮನುಷ್ಯನಿಗೆ ಮಾತ್ರ" ಈ ಮಾತನ್ನು ಆಡಿದವರು

(1) ಶಂಶುದ್ದೀನ್ ಖಾನ್

(2) ನಾದಿರ್ ಷಾ

(3) ಅಲಾವಿಖಾನ್

(4) ರಜ್ವಿ

**85.** "ವಿಜ್ಞಾನವೆಂಬುದು ಮುಚ್ಚಿಕೊಂಡಿರುವ ವ್ಯವಸ್ಥೆಯಲ್ಲ, ಅದು ಎಲ್ಲಾದರೂ ಸರಿ ಸತ್ಯಾನ್ವೇಷಣೆಗಾಗಿ ತೆರೆದುಕೊಂಡಿರುತ್ತದೆ" ಎಂದವರು

(1) ಎಚ್. ನರಸಿಂಹಯ್ಯ

(2) ಜವಾಹರಲಾಲ್ ನೆಹರು

(3) ಡಾರ್ವಿನ್

(4) ಡೇವಿಡ್ ಹಿಲ್ಬರ್ ಸನ್

**86.** ಚೋಮನದುಡಿ ಕಾದಂಬರಿಯಲ್ಲಿ 'ಬಳಿ ತೆಗೆಯುವವ' ಎಂಬ ಪದದ ಅರ್ಥ.

(1) ಬಳಗದ ಸೂತಕ ನಿವಾರಣೆ

(2) ಭೂತದ ಸೋಂಕು ನಿವಾರಿಸುವ ವಿಧಿ

(3) ಲೇಪನ ನಿವಾರಣೆ

(4) ಸ್ವಚ್ಛಗೊಳಿಸು

**87.** 'ದೇವರೇ ಮನುಷ್ಯನನ್ನು ಎಷ್ಟು ಕ್ಲಿಷ್ಟವಾಗಿ ಹುಟ್ಟಿಸಿರುವೆ. ಆತನಿಗೆ ಅವನ ಸೆರೆಮನೆಗಳೇ ಗೊತ್ತಿಲ್ಲ' ಈ ಸಂಭಾಷಣೆ ಬರುವ ನಾಟಕ

(1) ಸಂಕ್ರಾತಿ

(2) ಗುಣಮುಖ

(3) ಪಾಪದ ಹೂವುಗಳು

(4) ದೊರೆ ಈಡಿಪಸ್

**88.** 'ಧರ್ಮವಿಲ್ಲದ ವಿಜ್ಞಾನ ಕುಂಟು ಮತ್ತು ವಿಜ್ಞಾನವಿಲ್ಲದ ಧರ್ಮ ಕುರುಡು' ಎಂಬ ಹೇಳಿಕೆ ಬರುವ ಕೃತಿ

(1) ನೆನಪಿನ ದೋಣಿಯಲ್ಲಿ

(2) ಊರು ಕೇರಿ

(3) ತೆರೆದ ಮನ

(4) ಗೌರ್ನಮೆಂಟ್ ಬ್ರಾಹ್ಮಣ



WWW.SHIKARAT.COM

SHIKARAT

**89.** ಸೋದರರೊಳ್ ಸೋದರರಂ ಕಾದಿಸುವುದು ಸುತನ ತಂದೆಯೆಡೆಯೊಳ್ ಬಿಡದು ತ್ವಾದಿಸುವುದು ಕೋಪಮನಳವೀದೊರೆತೆನೆ ತೊಡವುರ್ದೆಂತು ರಾಜ್ಯಶ್ರೀಯೊಳ್ – ಈ ವರ್ಣನೆಯ ಆಶಯ ________

(1) ಭಾವನೆ, ಸಂಬಂಧಗಳ ಅನಿಶ್ಚಿತತೆ

(2) ದುಃಖ ಸಂಕಟದ ಅನಿಶ್ಚಿತತೆ

(3) ಸಂಸಾರ, ದೇಹದ ಅನಿಶ್ಚತತೆ

(4) ಸಂಪತ್ತು, ಪದವಿ, ಸಂಬಂಧಗಳ ಅನಿಶ್ಚಿತತೆ

**90.** ಕೆಳಕಂಡ ಹೇಳಿಕೆಗಳಲ್ಲಿ ಯಾವುದು ಮಧ್ಯಯುಗದ ವೈಶಿಷ್ಟ್ಯವಲ್ಲ ?

(1) ಕನ್ನಡ ಸಾಹಿತ್ಯವು ಮಾರ್ಗದಿಂದ ದೇಶಿಗೆ ಸಂಕ್ರಮಣಗೊಂಡ ಯುಗ

(2) ಈ ಯುಗದ ಹರಹು ಬಸವನಿಂದ ಕುಮಾರವ್ಯಾಸನವರೆಗೆ

(3) ವಚನ ಸಾಹಿತ್ಯ ರೂಪದ ಉದಯ ಮತ್ತು ವೈವಿಧ್ಯಪೂರ್ಣ ಸಂಪತ್ತು ನಿರ್ಮಾಣ

(4) ಈ ಯುಗದಲ್ಲಿ ಮಾರ್ಗಶೈಲಿಯ ಚಂಪೂಕೃತಿಗಾಳಾವುವೂ ರಚನೆಗೊಳ್ಳಲ್ಲಿಲ್ಲ.

**91.** ಕಲಿಯುಗದವರಿಗೆ ಕಾಮಧೇನು, ಕಲಿತವರಿಗೆ 'ಕಲ್ಪವೃಕ್ಷ' ಎಂಬ ಖ್ಯಾತಿ ಪಡೆದ ಕೃತಿ.

(1) ಕರ್ಣಾಟಭಾರತ ಕಥಾಮಂಜರಿ

(2) ವ್ಯಾಸಭಾರತ

(3) ಪಂಪಭಾರತ

(4) ಭಾಗವತ

**92.** ಶಿವಶರಣೆಯರು ಯಾವ ವಿಷಯದ ಬಗ್ಗೆ ಹೆಚ್ಚಾಗಿ ವಚನಗಳನ್ನು ಬರೆದಿದ್ದಾರೆ?

(1) ನಿಷ್ಕಾಮಕರ್ಮದ ಬಗ್ಗೆ

(2) ವ್ರತಗಳ ಆಚರಣೆಯ ಬಗ್ಗೆ

(3) ಸತ್ಯ ಶುದ್ಧ ಕಾಯಕದ ಬಗ್ಗೆ

(4) ಸ್ವರ್ಗ–ನರಕಗಳ ಬಗ್ಗೆ

**93.** "ಉಚಿತಕೆ ತಕ್ಕಷ್ಟು ಪೇಳ್ವೆನಧ್ಯಾತ್ಮವೆ ನಿಚಿತ ಪ್ರಯೋಜನವೆನಗೆ" ಎಂದು ಹೇಳಿದ ಕವಿ ಯಾರು?

(1) ಬ್ರಹ್ಮಕವಿ

(2) ಶಾಂತಿ ಕೀರ್ತಿಮುನಿ

(3) ರತ್ನಾಕರವರ್ಣಿ

(4) ಪದ್ಮರಸ

SHIKARAT



SHIKARAT

94. "ತನ್ನ ತಾನು ತಿಳಿದ ಮೇಲೆ ಇನ್ನೇನಿನ್ನೇನೊ" ಎಂಬ ಪ್ರಸಿದ್ಧ ತತ್ವಪದ ಬರೆದವರು ಯಾರು?

(1) ಶಿಶುನಾಳ ಶರೀಫ

(2) ಕಡಕೋಳ ಮಡಿವಾಳಪ್ಪ

(3) ಕೂಡಲೂರು ಬಸವಲಿಂಗ ಶರಣರು

(4) ಕೊಡೆಕಲ್ಲ ಬಸವಣ್ಣ

95. ಧರ್ಮ ನಿರೂಪಣೆಗಾಗಿ ಜೈನರು ಮೊದಲಿಗೆ ಸ್ವೀಕರಿಸಿದ ಭಾಷೆ ಯಾವುದು?

(1) ಪಾಲಿ

(2) ಸಂಸ್ಕೃತ

(3) ಪ್ರಾಕೃತ

(4) ಕನ್ನಡ

96. 'ಬೆದಂಡೆ' ಕಾವ್ಯರೂಪದ ವಿಶೇಷ ಲಕ್ಷಣ.

(1) ಗದ್ಯ–ಪದ್ಯ

(2) ಕಂದ–ವೃತ್ತ

(3) ಮಾರ್ಗ–ದೇಸಿ

(4) ಅಕ್ಕರ–ಚೌಪದಿ

97. ಪುರುಷ ಜಗತ್ತಿನಲ್ಲಿ ಶೋಷಿತ ಮಹಿಳೆಯ ಸಂಕೇತವಾಗಿ ಕಾಣುವ ಅನುಪಮಾ ನಿರಂಜನರ ಪೌರಾಣಿಕ ಕೃತಿ.

(1) ಸಸ್ಯಶಾಮಲಾ

(2) ಆಳ

(3) ಶ್ವೇತಾಂಬರಿ

(4) ಮಾಧವಿ

98. Existintialism is a positive Philosophy - ಇದರ ಸರಿಯಾದ ಅನುವಾದ

(1) ಅಸ್ತಿತ್ವವಾದವೆಂದರೆ ಒಂದು ಇತ್ಯಾತ್ಮಕ ತತ್ವಜ್ಞಾನ

(2) ಅಸ್ತಿತ್ವವಾದವೆಂದರೆ ಒಂದು ಸ್ವೀಕಾರಾತ್ಮಕ ತತ್ವಜ್ಞಾನ

(3) ಅಸ್ತಿತ್ವವಾದವೆಂದರೆ ಒಂದು ನಕಾರಾತ್ಮಕ ತತ್ವಜ್ಞಾನ

(4) ಇದು ಯಾವುದೂ ಅಲ್ಲ.

99. 'ನನಸಾಗದ ಕನಸು' ಇದು ಯಾರ ಆತ್ಮಕಥನ?

(1) ಬಸವರಾಜ ಕಟ್ಟೀಮನಿ

(2) ಶಿವರಾಮ ಕಾರಂತ

(3) ಕಡಿದಾಳ್ ಮಂಜಪ್ಪ

(4) ನಿರಂಜನ

100. ಟಿ.ಎಸ್. ಎಲಿಯಟ್ಟನು ಸೃಜನಕ್ರಿಯೆ ಬಗ್ಗೆ ಮಾತನಾಡುತ್ತ ಕಲೆಯ ರೂಪದಲ್ಲಿ ಭಾವಕ್ಕೆ ಅಭಿವ್ಯಕ್ತಿ ಕೊಡುವ ಉತ್ತಮ ವಿಧಾನವೆಂದು ಸೂಚಿಸಿರುವುದು.

(1) ವಸ್ತು ಪ್ರತಿ ರೂಪವನ್ನು ಕಂಡುಕೊಳ್ಳುವಿಕೆ (Objective Correlative)

(2) ವ್ಯಕ್ತಿತ್ವ ನಿರಸನಗೊಳಿಸುಕೊಳ್ಳುವಿಕೆ (Escape from the personality)

(3) ಸಂವೇದನೆಯನ್ನು ಏಕೀಭವಿಸುವಿಕೆ (Unification of sensibility)

(4) ಸಂವೇದನೆಯನ್ನು ವಿದಳನಗೊಳಿಸುವಿಕೆ (Dissociation of sensibility)

SHIKARAT



SHIKARAT

## SPACE FOR ROUGH WORK

SHIKARAT


WWW.SHIKARAT.COM
SHIKARAT